ಕರಾಸಕೈಅನಿನಿ

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ,
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ನೋಂದಣಿ ಸಂಖ್ಯೆ:ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು-560 010.
ಫೋನ್:080-2340 7011 to 25, ಫ್ಯಾಕ್ಸ್:91-2314 3566 / 2338 9070 ತಂತಿ: ಮೈಸ್ಮಾಲ್ ಕಾರ್ಪ್
ಇ-ಮೈಲ್:kssidcho@karnatakagov.in ವೆಬ್ ಸೈಟ್:www.kssidc.co.in

---

ಸಂಖ್ಯೆ:ಕೈವ/ಸಾಮಾನ್ಯ /ನೀಲಿ ನಕ್ಷೆ ಅನುಮೋದನೆ/2021-2025 ದಿನಾಂಕ 06.03.2025

# ಕಛೇರಿ ಆದೇಶ

ವಿಷಯ: ಕೈಗಾರಿಕಾ ವಸಾಹತುಗಳಲ್ಲಿ ನಿವೇಶನಗಳನ್ನು ದಿನಾಂಕ 01.04.2014ರ ನಂತರ ಹಂಚಿಕೆ ಪಡೆದಿರುವ ಉದ್ದಿಮೆದಾರರಿಗೆ ಕೈಗಾರಿಕಾ ಕಟ್ಟಡ ನಿರ್ಮಾಣದ ನೀಲಿ ನಕ್ಷೆ ಅನುಮೋದನೆ ಹಾಗೂ ಯೋಜನೆ ಕಾರ್ಯಗತಗೊಳಿಸಲು ಕಾಲಾವಕಾಶ ವಿಸ್ತರಿಸುವ ಬಗ್ಗೆ.

ಉಲ್ಲೇಖ: ಈ ಕಛೇರಿ ಆದೇಶ ಸಮ ಸಂಖ್ಯೆ ದಿನಾಂಕ 06.05.2022 ಹಾಗೂ ದಿನಾಂಕ 15.05.2024:

---

ದಿನಾಂಕ 01.04.2014ರ ನಂತರ ಹಂಚಿಕೆ ಪಡೆದಿರುವ ನಿವೇಶನಗಳ ಹಂಚಿಕೆದಾರರಿಗೆ ಕೈಗಾರಿಕಾ ಕಟ್ಟಡ ನಿರ್ಮಾಣದ ನೀಲಿ ನಕ್ಷೆ ಅನುಮೋದನೆ ಹಾಗೂ ಯೋಜನೆ ಕಾರ್ಯಗತಗೊಳಿಸಲು ಕಾಲಾವಕಾಶ ನೀಡುವ ಬಗ್ಗೆ ದಿನಾಂಕ 23.04.2022 ರಂದು ಜರುಗಿದ ನಿಗಮದ 365ನೇ ಮಂಡಳಿ ಸಭೆಯಲ್ಲಿ ಈ ಕೆಳಗಿನಂತೆ ನಿರ್ಣಯ ಕೈಗೊಂಡಿರುತ್ತದೆ.

"ಮಂಡಳಿಯು ಸುಧೀರ್ಘವಾಗಿ ಚರ್ಚಿಸಿ, ಉದ್ದಿಮೆದಾರರಿಗೆ ಕೈಗಾರಿಕೆ ಪ್ರಾರಂಭ ಮಾಡಲು ಕೈಗಾರಿಕಾ ಸ್ನೇಹಿಯಾಗಿ ಸಹಾಯಹಸ್ತ ಚಾಚುವ ಉದ್ದೇಶದಿಂದ ಈ ಕೆಳಕಂಡ ಕೋಷ್ಟಕದಲ್ಲಿ ಸೂಚಿಸಿರುವಂತೆ 10 ವರ್ಷಗಳ ಅವಧಿಗೆ ಹಂಚಿಕೆ ಪಡೆದಿರುವ ಹಂಚಿಕೆದಾರರುಗಳಿಗೆ ಉದ್ದಿಮೆ ಪ್ರಾರಂಭ ಮಾಡಲು ನಿಗದಿಪಡಿಸಿರುವ **ಅವಧಿಯ ನಂತರ ವಾರ್ಷಿಕವಾಗಿ ದಂಡ ವಿಧಿಸಿ,** ದಿನಾಂಕ 31.03.2024ರವರೆಗೆ ಕಾಲಾವಕಾಶ ನೀಡುವಂತೆ ಅನುಮೋದಿಸಿ ಸದರಿ ನಿರ್ಣಯವನ್ನು ಸೂಕ್ತವಾಗಿ ಪ್ರಚಾರಪಡಿಸುವಂತೆ ಮಂಡಳಿಯು ಸೂಚಿಸಿತು."

| ಕ್ರ.ಸ | ಕೋಷ್ಟಕ | ಮೊತ್ತ ಶೇಕಡ ವಾರು |
|---|---|---|
| 1 | ನಿಗದಿತ ಅವಧಿಯಲ್ಲಿ ನೀಲಿ ನಕ್ಷೆ ಅನುಮೋದನೆ ಪಡೆಯದ ಹಂಚಿಕೆದಾರರು ಪಾವತಿಸಬೇಕಾದ ದಂಡ + ಅನ್ವಯಿಸುವ ತೆರಿಗೆ | ನಿವೇಶನದ ಚಾಲ್ತಿ ದರದ ಶೇ.3 ಮತ್ತು ಅನ್ವಯಿಸುವ ತೆರಿಗೆ |
| 2 | ನೀಲಿ ನಕ್ಷೆ ಅನುಮೋದನೆ ಪಡೆದು ಅರೆ ನಿರ್ಮಾಣ ಹಂತದಲ್ಲಿ ಇರುವ ಹಂಚಿಕೆದಾರರು ಪಾವತಿಸಬೇಕಾದ ದಂಡ+ಅನ್ವಯಿಸುವ ತೆರಿಗೆ | ನಿವೇಶನದ ಚಾಲ್ತಿ ದರದ ಶೇ.1 ಮತ್ತು ಅನ್ವಯಿಸುವ ತೆರಿಗೆ |
| 3 | ವಿದ್ಯುತ್ ಸಂಪರ್ಕ ಪಡೆಯಲು ನಿರಾಕ್ಷೇಪಣಾ ಪ್ರಮಾಣ ಕೋರಿರುವ ಹಂಚಿಕೆದಾರರು ಪಾವತಿಸಬೇಕಾದ ದಂಡ+ಅನ್ವಯಿಸುವ ತೆರಿಗೆ | ನಿವೇಶನದ ಚಾಲ್ತಿ ದರದ ಶೆ.0.5 ಮತ್ತು ಅನ್ವಯಿಸು ತೆರಿಗೆ |

..2.

Scanned with OKEN Scanner

ಅದರಂತೆ ದಿನಾಂಕ 06.05.2022 ರಂದು ಕಛೇರಿ ಆದೇಶ ಹೊರಡಿಸಿ, ವಿವಿಧ ಕೈಗಾರಿಕಾ ವಸಾಹತುಗಳಲ್ಲಿ ದಿನಾಂಕ 01.10.2014ರ ನಂತರ ನಿವೇಶನ ಹಂಚಿಕೆ ಪಡೆದು ನಿಗದಿತ ಅವಧಿ 2 / 5 ವರ್ಷದೊಳಗೆ ನೀಲಿ ನಕ್ಷೆ ಅನುಮೋದನೆ ಪಡೆದು ಯೋಜನೆ ಕಾರ್ಯಗತಗೊಳಿಸಲು ವಿಫಲರಾದ ಎಲ್ಲಾ ಹಂಚಿಕೆದಾರರುಗಳಿಗೆ ಮೇಲಿನ ಕೋಷ್ಟಕದಲ್ಲಿ ತಿಳಿಸಿದಂತೆ ದಂಡ ವಸೂಲಿ ಮಾಡಿ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು ಕಾಲಾವಕಾಶ ನೀಡಲು ಆದೇಶಿಸಲಾಗಿರುತ್ತದೆ.

ಈ ಕಾಲಾವಕಾಶವು ದಿನಾಂಕ 31.03.2024ಕ್ಕೆ ಮುಕ್ತಾಯವಾದ ಹಿನ್ನೆಲೆಯಲ್ಲಿ, ದಿನಾಂಕ 15.05.2024 ರಂದು ಕಛೇರಿ ಆದೇಶ ಹೊರಡಿಸಿ, ದಿನಾಂಕ 30.09.2024ರವರೆಗೆ ಈ ಕಾಲಾವಕಾಶವನ್ನು ವಿಸ್ತರಿಸಿ, ಅದನ್ನು ದಿನಾಂಕ 25.07.2024 ರಂದು ಜರುಗಿದ ನಿಗಮದ 373ನೇ ಮಂಡಳಿ ಸಭೆಯಲ್ಲಿ ಪ್ರಸ್ತಾವನೆ ಮಂಡಿಸಿ ಅನುಸಮರ್ಥನೆ ಪಡೆಯಲಾಗಿರುತ್ತದೆ.

ಈ ಕಾಲಾವಕಾಶವು ಸಹ ದಿನಾಂಕ 30.09.2024 ರಂದು ಮುಕ್ತಾಯವಾಗಿರುವುದರಿಂದ, **ದಿನಾಂಕ 01.04.2014ರ ನಂತರ ಹಂಚಿಕೆ ಪಡೆದಿರುವ (10 ವರ್ಷಗಳ ಕರಾರು ಅವಧಿಗೆ ಹಂಚಿಕೆ ಪಡೆದಿರುವ) ಉದ್ದಿಮೆದಾರರಿಗೆ ದಿನಾಂಕ 30.09.2025ರವರೆಗೆ ವಿಸ್ತರಿಸುವ ಅವಶ್ಯಕತೆ ಇರುವ ಕಾರಣ,** ಈ ಪ್ರಸ್ತಾವನೆಯನ್ನು ಮಂಡಳಿ ಸಭೆಯ ಅವಲೋಕನ ಹಾಗೂ ನಿರ್ಣಯಕ್ಕಾಗಿ ಕಾರ್ಯಸೂಚಿ ಮಂಡಿಸಲಾಗಿತ್ತು.

ಮಂಡಳ ಸಭೆಯು ಸುದೀರ್ಘವಾಗಿ ಚರ್ಚಿಸಿ, ದಿನಾಂಕ: 01.04.2014 ರ ನಂತರ ಹಂಚಿಕೆ ಪಡೆದಿರುವ ನಿವೇಶನಗಳ ಹಂಚಿಕೆದಾರರಿಗೆ ಕೈಗಾರಿಕಾ ಕಟ್ಟಡ ನಿರ್ಮಾಣದ ನೀಲಿ ನಕ್ಷೆ ಅನುಮೋದನೆ ಹಾಗೂ ಯೋಜನೆ ಕಾರ್ಯಗತಗೊಳಿಸಲು ಕಾಲಾವಕಾಶ ನೀಡುವ ಬಗ್ಗೆ ದಿನಾಂಕ: 06.05.2022 ರಂದು ಹೊರಡಿಸಿದ ಆದೇಶವನ್ನು ದಿನಾಂಕ: 30.09.2025 ರವರೆಗೆ ವಿಸ್ತರಿಸಲು ಮಂಡಳಿಯು ಅನುಮೋದಿಸಿರುತ್ತದೆ.

ಮಂಡಳಿಯ ತೀರ್ಮಾನದಂತೆ ನಿಗಮದ ವಿವಿಧ ಕೈಗಾರಿಕಾ ವಸಾಹತುಗಳಲ್ಲಿ ದಿನಾಂಕ 01.10.2014ರ ನಂತರ ನಿವೇಶನ ಹಂಚಿಕೆ ಪಡೆದು ನಿಗಧಿತ ಅವಧಿ 2/5 ವರ್ಷದೊಳಗೆ ನೀಲಿ ನಕ್ಷೆ ಅನುಮೋದನೆ ಪಡೆದು ಯೋಜನೆ ಕಾರ್ಯಗತಗೊಳಿಸಲು ವಿಫಲರಾದ ಎಲ್ಲಾ ಹಂಚಿಕೆದಾರರುಗಳಿಗೆ ಮೇಲಿನ ಕೋಷ್ಟಕದಲ್ಲಿ ತಿಳಿಸಿದಂತೆ **ವಾರ್ಷಿಕವಾಗಿ ದಂಡ ವಸೂಲಿ ಮಾಡಿ ಕಾಲಾವಕಾಶವನ್ನು ಸಕ್ಷಮ ಪ್ರಾಧಿಕಾರವಾದ** ಈ ಕೆಳ ಸಹಿದಾರರ ಅನುಮೋದನೆ ಪಡೆದು **ದಿನಾಂಕ 30.09.2025 ರವರೆಗೆ** ಕಾಲಾವಕಾಶ ನೀಡಲು ಈ ಮೂಲಕ ಎಲ್ಲಾ ಸಹಾಯಕ ಪ್ರಧಾನ ವ್ಯವಸ್ಥಾಪಕರುಗಳಿಗೆ ಸೂಚಿಸಿದೆ.

ವ್ಯವಸ್ಥಾಪಕ ನಿರ್ದೇಶಕರು

P.T.O



Scanned with OKEN Scanner

ಅವರಿಗೆ,

ಸಹಾಯಕ ಪ್ರಧಾನ ವ್ಯವಸ್ಥಾಪಕರು, ಕರಾಸಕೈಅನಿನಿ, ಬೆಂಗಳೂರು ವಿಭಾಗ, ಕೈಗಾರಿಕಾ ವಸಾಹತು, ತುಮಕೂರು, ಮೈಸೂರು, ಶಿವಮೊಗ್ಗ, ಹುಬ್ಬಳ್ಳಿ, ಬೆಳಗಾವಿ, ಕಲಬುರ್ಗಿ.

ಪ್ರತಿ:

1. ಪ್ರಧಾನ ವ್ಯವಸ್ಥಾಪಕರು(ಕೈವ)/(ಆ&ಭೂ), ಕರಾಸಕೈಅನಿನಿ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು.
2. ಉಪ ಪ್ರಧಾನ ವ್ಯವಸ್ಥಾಪಕರು (ಕೈವ)/(ಹಣಕಾಸು), ಕರಾಸಕೈಅನಿನಿ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು.
3. ಕಾನೂನು ಸಲಹೆಗಾರರು, ಕರಾಸಕೈಅನಿನಿ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು.

Scanned with OKEN Scanner